C.R.P.67

Form No.4 (Criminal)
Deposition Sheets
(R.P.No.57)

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ

S.C. No.129/2025 ಪಿ.ಡಬ್ಲ್ಯೂ-2 ಸಿ.ಡಬ್ಲ್ಯೂ-3

ದಿನಾಂಕಃ- 09.03.2026 ರಂದು ಪ್ರಮಾಣ ವಚನ ಭೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | ಮಹದೇವಸ್ವಾಮಿ @ ಮಾದೇಶ |
| ತಂದೆಯ ಹೆಸರು | ಮಹದೇವ |
| ವಯಸ್ಸು | 36 ವರ್ಷ |
| ಉದ್ಯೋಗ | Team member Toyota Company, Bidadi |
| ವಾಸ | ಕೆ ಎಂ ದೊಡ್ಡಿ ಗ್ರಾಮ, ಮಳವಳ್ಳಿ ತಾಲ್ಲೂಕು |

ಮುಖ್ಯ ವಿಚಾರಣೆಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-

1. ನಾನು ITI ಓದಿದ್ದೇನೆ.

2. ನಾನು ಕಳೆದ 13 ವರುಷಗಳಿಂದ ಬಿಡದಿಯಲ್ಲಿ ಇರುವ Toyota Company ಯಲ್ಲಿ ಕೆಲಸ ಮಾಡುತ್ತಿದ್ದೇನೆ.

3. ನನ್ನ ಹೆಂಡತಿಯ ಹೆಸರು ವಿನುತಾ. ನನ್ನ ಮಾವನ ಹೆಸರು ಶಿವಮಲ್ಲಪ್ಪ. ಚಾಸಾ-2 ನೇ ಸುನಂದಮ್ಮ ನನ್ನ ಅತ್ತೆ. ಚಾಸಾ- 9 ನೇ ವನಿತಾ ನನ್ನ ಹೆಂಡತಿಯ ತಂಗಿ. ಚಾಸಾ-5 ನೇ ರಂಜನ್ ನನ್ನ ಹೆಂಡತಿ ತಂಗಿ ವನಿತಾಳ ಗಂಡ.

4. ಈ ಪ್ರಕರಣದ ಆರೋಪಿ ಅಜಯ್ ನನ್ನ ಹೆಂಡತಿ ವಿನುತಾಳಿಗೆ ಅಣ್ಣ.

5. ನನ್ನ ಮಾವ ಬಾಚನಹಳ್ಳಿ ಗ್ರಾಮದಲ್ಲಿ ಮಧ್ಯಪಾನ ಮಾಡಿ ಅನೇಕ ಸಾಲ ಮಾಡಿದ್ದರಿಂದ ನನ್ನ ಅತ್ತೆ 2025 ಜುಲೈ ತಿಂಗಳಿಂದ 7 ತಿಂಗಳ ಹಿಂದೆ ಬೆಂಗಳೂರಿನಲ್ಲಿ ಗಾರ್ಮೆಂಟ್ಸ್ ನಲ್ಲಿ ಕೆಲಸಕ್ಕೆ ಸೇರಿಕೊಂಡರು.

6. ಕಳೆದ 4 ವರುಷಗಳಿಂದ ವನಿತಾ ಮತ್ತು ರಂಜನ್ ಬೆಂಗಳೂರಿನಲ್ಲಿ ವಾಸವಾಗಿದ್ದಾರೆ.

7. ನನ್ನ ಅತ್ತೆ ಬೆಂಗಳೂರಿನಲ್ಲಿ ವನಿತಾಳ ಮನೆಯಲ್ಲಿ ಇದ್ದುಕೊಂಡು ಗಾರ್ಮೆಂಟ್ಸ್ ನಲ್ಲಿ ಕೆಲಸ ಮಾಡುತ್ತಿರುವ ಸಮಯದಲ್ಲಿ ಶಿವಮಲ್ಲಪ್ಪ ಮತ್ತು ಆರೋಪಿ ಅಜಯ್ ಬಾಚನಹಳ್ಳಿ ಗ್ರಾಮದಲ್ಲಿ ವಾಸವಾಗಿದ್ದರು.

8. ಇವತ್ತಿಗೆ 7 ತಿಂಗಳ ಹಿಂದೆ ಬಾಚನಹಳ್ಳಿ ಗ್ರಾಮದಲ್ಲಿ ಇರುವ ಮನೆಯಲ್ಲಿ ನನ್ನ ಮಾವ ಶಿವಮಲ್ಲಪ್ಪ ಮೃತಪಟ್ಟಿದ್ದಾರೆ. ನನ್ನ ಮಾವ ಶಿವಮಲ್ಲಪ್ಪ ಮೃತಪಟ್ಟ ಸುದ್ದಿಯನ್ನು ಬೆಂಗಳೂರಿನಲ್ಲಿ ಇದ್ದ ಸುನಂದಮ್ಮನಿಗೆ ನಾನು ಮೊಬೈಲು ಕರೆ ಮಾಡಿ ತಿಳಿಸಿದೆನು.

9. ಶಿವಮಲ್ಲಪ್ಪ ಯಾವ ಕಾರಣದಿಂದ ಅಥವಾ ಯಾರಿಂದ ಮೃತಪಟ್ಟರು ಎನ್ನುವುದು ನನಗೆ ಗೊತ್ತಿಲ್ಲ.

10. ನಾನು ಪೊಲೀಸರ ಸಮಕ್ಷಮ ನನ್ನ ಮಾವ ಶಿವಮಲ್ಲಪ್ಪ ಹಾಗೂ ಅವರ ಮಗನಾದ ಅಜಯ್ ................................................................ ಶಿವಮಲ್ಲಪ್ಪ ರವರಿಗೆ ಹೊಡೆದು ಸಾಯಿಸಿರಬಹುದು ಎಂದು ಹೇಳಿಕೆ ಕೊಟ್ಟಿಲ್ಲ.

11. ನಾನು ಪೊಲೀಸರ ಸಮಕ್ಷಮ ನಮ್ಮ ಮಾವನಿಗೆ ಮೂಗಿನಲ್ಲಿ ರಕ್ತ ಹಾಗೂ ಕತ್ತಿನಲ್ಲಿ ಮತ್ತು ಕೆನ್ನೆಯಲ್ಲಿ ಗಾಯವಾಗಿದ್ದನ್ನು ................................................................ ರಕ್ತವನ್ನು ತಂದೆಯ ಬಟ್ಟೆಯಲ್ಲಿ ಒರೆಸಿರುವುದಾಗಿ ತಿಳಿಸಿದನು ಎಂದು ಹೇಳಿಕೆ ಕೊಟ್ಟಿಲ್ಲ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರ ವಿನಂತಿಯ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಪರವಾನಗಿ ಕೊಡಲಾಯಿತು)

<u>ಪಾಟೀ ಸವಾಲುಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-</u>

1. ನಾನು ದಿಃ 30.07.2025 ರಂದು ಪೊಲೀಸರ ಸಮಕ್ಷಮ ನಿಪಿ-4 ರಲ್ಲಿ ಗುರುತಿಸಿರುವ ದಾಖಲೆಯಲ್ಲಿ ಬರೆದಿರುವಂತೆ ನನ್ನ ಮಾವ ಶಿವಮಲ್ಲಪ್ಪ ಹಾಗೂ ಅವರ ಮಗನಾದ ಅಜಯ್ ............................................................ ಶಿವಮಲ್ಲಪ್ಪ ರವರಿಗೆ ಹೊಡೆದು ಸಾಯಿಸಿರಬಹುದು ಎಂದು ಹೇಳಿಕೆ ಕೊಟ್ಟಿದ್ದೇನೆ ಎನ್ನುವುದು ಸರಿಯಲ್ಲ.

2. ನಾನು ದಿಃ 03.09.2025 ರಂದು ಪೊಲೀಸರ ಸಮಕ್ಷಮ ನಿಪಿ-5 ರಲ್ಲಿ ಗುರುತಿಸಿರುವ ದಾಖಲೆಯಲ್ಲಿ ಬರೆದಿರುವಂತೆ ನಮ್ಮ ಮಾವನಿಗೆ ಮೂಗಿನಲ್ಲಿ ರಕ್ತ ಹಾಗೂ ಕತ್ತಿನಲ್ಲಿ ಮತ್ತು ಕೆನ್ನೆಯಲ್ಲಿ ಗಾಯವಾಗಿದ್ದನ್ನು ............................................................ ರಕ್ತವನ್ನು ತಂದೆಯ ಬಟ್ಟೆಯಲ್ಲಿ ಒರೆಸಿರುವುದಾಗಿ ತಿಳಿಸಿದನು ಎಂದು ಹೇಳಿಕೆ ಕೊಟ್ಟಿದ್ದೇನೆ ಎನ್ನುವುದು ಸರಿಯಲ್ಲ.

3. ನಾನು ಈಗ ಆರೋಪಿಗೆ ಸಹಾಯ ಮಾಡಲು ಶಿವಮಲ್ಲಪ್ಪನವರ ಮರಣದ ಕಾರಣದ ಕುರಿತು ಸುಳ್ಳು ಸಾಕ್ಷಿ ಹೇಳಿದ್ದೇನೆ ಎನ್ನುವುದು ಸರಿಯಲ್ಲ.

<u>ಪಾಟೀ ಸವಾಲುಃ- ಆರೋಪಿ ಪರವಾಗಿ ಶ್ರೀ.ಎಂ.ಬಿ.ಬಸವರಾಜು ವಕೀಲರಿಂದಃ-</u>

ಇಲ್ಲ ಎಂದು ಹೇಳಿದ್ದಾರೆ.

ಮರು ವಿಚಾರಣೆಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-

ಇಲ್ಲ ಎಂದು ಹೇಳಿದ್ದಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಸುಬ್ರಮಣ್ಯ.ಜೆ. ಎನ್.)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.